ಫೋಟೊ ಪ್ರಬಂಧ



# ಹುಲಿ ಹುಡುಕುತ್ತ ಕಾಡಿನಭಾಷೆಯ ಗುಂಗಿನಲ್ಲಿ

**'ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ'ದಲ್ಲಿ ಹುಲಿಗಳ ಛಾಯಾಚಿತ್ರ ಶಿಕಾರಿಗೆ ಹೊರಟ ತಂಡಕ್ಕೆ ಹೆಜ್ಜೆಹೆಜ್ಜೆಗೂ ಎದುರಾದುದು ನಿಸರ್ಗದ ಪಾಠ. ಕಾಡಿನ ಭಾಷೆಯನ್ನು ಅರ್ಥ ಮಾಡಿಕೊಳ್ಳುತ್ತ, ನಿಸರ್ಗದ ಒಗಟುಗಳಿಗೆ ಬೆರಗುಗೊಳ್ಳುತ್ತ ಸಾಗಿದ ತಂಡ ಅನುಭವಿಸಿದ ತವಕ ತಲ್ಲಣಗಳ ಈ ಬರಹ, ಓದುಗರನ್ನೂ ಕಗ್ಗಾಡಿನೊಳಗೆ ಕೈಹಿಡಿದು ನಡೆಸುತ್ತದೆ.**

■ **ಕಲೀಮ್ ಉಲ್ಲಾ**

ಉತ್ತರ ಭಾರತದ ಹುಲಿಗಳ ಬೇಟೆಗೆ ಹೊರಟಿದ್ದೆವು. ಇದಕ್ಕಾಗಿ ನಡೆಸಿದ ತಯಾರಿ ಬರೋಬ್ಬರಿ ಒಂದು ತಿಂಗಳಿನದು. ಹೊರಟ ಗೆಳೆಯರು ದಿನದಿನವೂ ನಾವು ಅಲ್ಲಿ ಪಾಲಿಸಬೇಕಾದ ರೀತಿನೀತಿಗಳ ಬಗ್ಗೆ ಫೋನಿನಲ್ಲೇ ಮಾರುದ್ದದ ಭಾಷಣ ಕೊರೆಯುತ್ತಿದ್ದರು. ಸಾಕಷ್ಟು ತಿರುವು ಮುರುವುಗಳಿರುವ ರಸ್ತೆಗಳು; ಹಿಮಪಾತದ ಜೊತೆಗಿನ ಚಳಿಗಾಳಿ ಎಲ್ಲವೂ ಕಷ್ಟ ಎನ್ನುತ್ತಿದ್ದರು. ಒಟ್ಟಾರೆ ನಮ್ಮ ಪ್ರವಾಸ ಬಲುಪ್ರಯಾಸದ್ದೆಂದೂ, ಹೊಸ ಕಲಿಕೆ, ಹೊಸ ಸಾಹಸಗಳ ಮಹಾಪೂರವೇ ಅಲ್ಲಿ ಜರುಗಲಿದೆಯೆಂದು ಭವಿಷ್ಯವಾಣಿ ನುಡಿಯುತ್ತಿದ್ದರು. ಹಿಮಾಲಯದ ಟ್ರೆಕ್ಕಿಂಗ್ ಮಾಡಿ ಬಂದ ನನಗೆ ಇದೆಲ್ಲ ಹೊಸದಲ್ಲ ಎಂದು ಅವರಿಗೆ ಹೇಳುತ್ತಿದ್ದೆನಾದರೂ ನನಗೂ ಸಣ್ಣ ಹೆದರಿಕೆಯಿತ್ತು. ನಾವು ಹೀಗೆ ಹೋಗುವ ವಿಷಯವನ್ನು ಸಿಕ್ಕವರಿಗೆಲ್ಲಾ ಹೇಳಿ ಟಾಂಟಾಂ ಮಾಡಿ ಸಾಕಷ್ಟು ಪ್ರಚಾರವನ್ನೂ ಗಿಟ್ಟಿಸಿದ್ದೆವು. ನಮ್ಮಗಳ ತಯಾರಿ ನೋಡಿದ ಗೆಳೆಯರು, 'ಈ ಬಡ್ಡಿಮಕ್ಳು ಇನ್ನೆಂದೂ ಊರ ಕಡೆ ಮರಳಿ ಬರುವುದೇ ಇಲ್ಲವೇನೋ' ಎಂದು ಗೊಣಗಾಡುವಷ್ಟು ನಮ್ಮ ಸಿದ್ಧತೆ ನಡೆದಿತ್ತು.

ನಮ್ಮ ಮೊದಲ ಗುರಿ 520.9 ಚದರ ಕಿ.ಮೀ. ಉದ್ದವಿರುವ 'ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನವನ'ವಾಗಿತ್ತು. ಎತ್ತರದ ಬೆಟ್ಟಗಳು, ಜಿನುಗು ಹಳ್ಳದ ತೊರೆಗಳು, ಜೌಗು ಹೊಂಡಗಳು, ವಿಶಾಲ ಹುಲ್ಲುಗಾವಲುಗಳ ಜತೆಗೆ ದೊಡ್ಡ ಸರೋವರವನ್ನು ಒಳಗೊಂಡ ಈ ಸ್ಥಳ ಮೋಡಿ ಮಾಡುವಂತದ್ದು. ಸದಾ ಮಂಜಿನ ಪರದೆ ಹೊರುವ ಇಲ್ಲಿನ ವಿಭಿನ್ನ ನೈಸರ್ಗಿಕ ಹಿನ್ನೆಲೆಯಲ್ಲಿ ಹುಲಿಗಳ ಪಟ ತೆಗೆಯುವ ಕುತೂಹಲ ತುಸು ಹೆಚ್ಚೇ ಇತ್ತು. ಅದೇನೋ ಕಬಿನಿ ಮತ್ತು ಬಂಡೀಪುರದಲ್ಲಿ ಹುಲಿಗಳ ಚಿತ್ರ ತೆಗೆದರೂ ನಮ್ಮ ದುರಾಸೆ ಮುಗಿದಿರಲಿಲ್ಲ.

ರಾಮಗಂಗಾ ನದಿಯ ಉದ್ದಕ್ಕೂ ಹರಡಿರುವ ಇಲ್ಲಿನ ಅಭೇದ್ಯ ಕಾಡೇ ಒಂದು ವಿಶಿಷ್ಟ ಜಾಗ. ಬಂಡೆಕಲ್ಲುಗಳ ನಡುವೆ ರಭಸವಾಗಿ ಹರಿಯುವ ರಾಮಗಂಗಾ ನದಿ ಮುಂದೆ ಜಲಾಶಯ ಸೇರುತ್ತದೆ. ಅದರ ಮಡಿಲಲ್ಲೇ ನಾವು ಉಳಿಯುವ ಜಾಗ